**ಪಿ.ಡಬ್ಲ್ಯೂ–01**

**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.**

**ಸಿ.ಮಿಸ್.ನಂಃ 337/2026**

| | | |
|---|---|---|
| ಸಾಕ್ಷಿದಾರರ ಹೆಸರು | : | ಸರ್ವಮಂಗಳ |
| ತಂದೆಯ ಹೆಸರು | : | ಲೇಟ್ ಮಾದಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಲ್ಲರೆ ಗ್ರಾಮ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕ 28.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಡಿ.ಎಸ್.ಕೆ, ವಕೀಲರಿಂದಃ**

ನಾನು 1 ನೇ ಅರ್ಜಿದಾರಳಾಗಿದ್ದು, ನನ್ನ ಮುಖ್ಯ ವಿಚಾರಣೆ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಎದುರುದಾರರು ನೀಡಿರುವ ಅಲಭ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ–1 ಎಂದು ಗುರುತಿಸಲಾಯಿತು.

ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ–2 ಎಂದು ಗುರುತಿಸಲಾಯಿತು.

ನನ್ನ ಆಧಾರ್ ಕಾರ್ಡ್ ನ ಮೂಲ ಪ್ರತಿ ಮತ್ತು ನೋಟರಿ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಮೂಲ ಪ್ರತಿ ಮತ್ತು ನೋಟರಿ ಪ್ರತಿಯನ್ನು ಪರಿಶೀಲಿಸಿ, ಸರಿಯಾಗಿದೆ ಎಂದು ಕಂಡು ಬಂದಿದ್ದರಿಂದ ಮೂಲ ಪ್ರತಿಯನ್ನು ಸಾಕ್ಷಿಗೆ ಹಿಂದಿರುಗಿಸಿ, ನೋಟರಿ ಪ್ರತಿಯನ್ನು ನಿ.ಪಿ–3 ಎಂದು ಗುರುತಿಸಲಾಯಿತು.

**ಪಿ.ಡಬ್ಲ್ಯೂ-01**

ನನ್ನ ತಾಯಿ ಶಿವಮ್ಮ ದಿನಾಂಕ 20.05.1990 ರಂದು ಮೃತಪಟ್ಟಿದ್ದು, ಇದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ತಕರಾರು ಸಲ್ಲಿಸುವ ಸಲುವಾಗಿ ದಿನಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಸದರಿ ದಿನಪತ್ರಿಕೆಯನ್ನು ಹಾಜರುಪಡಿಸಿದ್ದೇನೆ. ಟೈಮ್ಸ್ ಆಫ್ ನಂಜನಗೂಡು ಕನ್ನಡ ದಿನಪತ್ರಿಕೆಯನ್ನು ನಿ.ಪಿ-4 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಅರ್ಜಿಯಲ್ಲಿ ಕೇಳಿರುವಂತೆ ಪರಿಹಾರ ಒದಗಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಪಾಟೀಸವಾಲುಃ ಎದುರುದಾರರು ಏಕಪಕ್ಷೀಯವಾಗಿರುತ್ತಾರೆ. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**